# ಪುರುಷ ಪ್ರಯತ್ನ ಮತ್ತು ಶರಣಾಗತಿ

ಸ್ವಾಮಿ ಶಾಂತಿವ್ರತಾನಂದ

ಆಧ್ಯಾತ್ಮಿಕ ಸಾಧಕರಿಗೆ ಮೈದೋರುವ ಕೆಲವು ವೈರುಧ್ಯಗಳಲ್ಲೊಂದು ಪುರುಷಪ್ರಯತ್ನ ಹಾಗೂ ಶರಣಾಗತಿ ಇವುಗಳಲ್ಲಿ ಯಾವುದು ಭಗವಂತನ ಸಾಕ್ಷಾತ್ಕಾರಕ್ಕೆ ಹೆಚ್ಚು ಅಗತ್ಯ ಎಂಬುದು. ಈ ಕುರಿತು ಚರ್ಚಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು; ಪ್ರಸ್ತುತ ಅವರು ಐರ್ಲೆಂಡಿನ ಡಬ್ಲಿನ್ ಕೇಂದ್ರದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವು ಗ್ರಂಥಗಳನ್ನೂ ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಉತ್ತಮ ಲೇಖನಗಳನ್ನು ಬರೆದಿದ್ದಾರೆ.

ಲಾಟು ಮಹಾರಾಜ್ (ಮುಂದೆ ಸ್ವಾಮಿ ಅದ್ಭುತಾನಂದರು) ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರ ಸೇವೆಗೆಂದು ನೆಲೆಸಿದ್ದರು. ಅದೇ ಸಮಯದಲ್ಲಿ ಶ್ರೀರಾಮಕೃಷ್ಣರು ಲಾಟುವಿನ ಆಧ್ಯಾತ್ಮಿಕ ಸಾಧನೆಗೆ ಬೇಕಾದ ಮಾರ್ಗದರ್ಶನವನ್ನು ನೀಡುತ್ತಿದ್ದರು.

ಒಮ್ಮೆ ಸಂಧ್ಯಾಸಮಯದಲ್ಲಿ ಲಾಟು ಮಹಾರಾಜ್ ಓಡಾಡುತ್ತಿದ್ದುದನ್ನು ಕಂಡು ಶ್ರೀರಾಮಕೃಷ್ಣರು ''ಧ್ಯಾನ ಮಾಡಬೇಕಾದ ಸಮಯದಲ್ಲಿ ಏಕೆ ಓಡಾಡುತ್ತಿರುವೆ?'' ಎಂದು ಪ್ರಶ್ನಿಸಿದರು. ಅದಕ್ಕೆ ಲಾಟು ''ಗುರುಗಳೇ, ನನಗೆ ಧ್ಯಾನದಲ್ಲಿ ರುಚಿ ಸಿಗುತ್ತಿಲ್ಲ, ಕಾಣುತ್ತಿಲ್ಲ. ಆದ್ದರಿಂದ ಧ್ಯಾನ ಮಾಡಲಿಲ್ಲ'' ಎಂದರು. ಶ್ರೀರಾಮಕೃಷ್ಣರು ಲಾಟುವಿನ ನಾಲಿಗೆಯ ಮೇಲೆ ಮಂತ್ರವೊಂದನ್ನು ಬರೆದು, ''ಈಗ ನೀನು ಹೋಗಿ ಧ್ಯಾನ ಮಾಡು''



ಲಾಟು ಮಹಾರಾಜ್

ಎಂದರು. ಲಾಟು ಧ್ಯಾನಕ್ಕೆ ಕುಳಿತುಕೊಂಡಾಗ, ಅಂದು ಅವರು ಧ್ಯಾನವನ್ನು ಏಕಾಗ್ರತೆಯಿಂದ ಹಾಗೂ ದೀರ್ಘಕಾಲ ಮಾಡಲು ಸಾಧ್ಯವಾಯಿತು. ಅಂದಿನಿಂದ ಅವರಿಗೆ ಧ್ಯಾನ ಎಂದೂ ನೀರಸವಾಗಲಿಲ್ಲ. ಬದಲಾಗಿ ಆನಂದಾನುಭವಕ್ಕೆ ದಾರಿಯಾಯಿತು.

ಇನ್ನು ಮಹಾನ್ ಕುಡುಕನಾಗಿದ್ದ, ವೇಶ್ಯೆಯರ ಮನೆಗೂ ಹೋಗಿದ್ದ ಗಿರೀಶ್‌ಚಂದ್ರ ಘೋಷನು ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಕೃಪೆಯಿಂದ, ಶರಣಾಗತನಾಗಿ ಮಹಾನ್ ಭಕ್ತನಾಗಿದ್ದು ನಮಗೆಲ್ಲ ತಿಳಿದ ವಿಷಯ.

ಇಂತಹ ಘಟನೆಗಳನ್ನು ಕೇಳಿದಾಗ, ಭಕ್ತರಲ್ಲಿ , ಆಧ್ಯಾತ್ಮಿಕ ಪಿಪಾಸುಗಳಲ್ಲಿ 'ನಾವು ಭಗವಂತನಲ್ಲಿ ಶರಣಾಗತರಾಗಿಬಿಟ್ಟರೆ, ಎಲ್ಲವೂ ನಮಗೆ ಸುಲಭವಾಗಿ ಬಿಡುತ್ತದೆ ಎಂಬ ಆಲೋಚನೆ ಬರುತ್ತದೆ. ಎಲ್ಲವೂ ಭಗವಂತನ ಇಚ್ಛೆ ಎಂದು ಹೇಳಲು ಆರಂಭಿಸುತ್ತಾರೆ. ಆದರೆ ಶರಣಾಗತಿ, ಪುರುಷ ಪ್ರಯತ್ನಕ್ಕಿಂತಲೂ ಕಠಿಣ. ಈ ವಿಷಯವನ್ನು ಮಹಾನ್ ಭಕ್ತರಾದ ಗಿರೀಶ್ ಚಂದ್ರ ಘೋಷರೇ ಖಚಿತಪಡಿಸಿದ್ದಾರೆ.

## ಪುರುಷ ಪ್ರಯತ್ನ ಮತ್ತು ಶರಣಾಗತಿಯಲ್ಲಿ ವಿವಿಧ ಹಂತಗಳು

ಅಮೂಲಾಗ್ರವಾಗಿ ವಿವಿಧ ಸಾಧಕರ ಜೀವನಗಳನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದಾಗ, ಈ ಕೆಳಗಿನ ವಿಷಯಗಳು ನಮ್ಮ ಗಮನಕ್ಕೆ ಬರುತ್ತವೆ.

೧. ಪುರುಷ ಪ್ರಯತ್ನ ಹೆಚ್ಚು; ಶರಣಾಗತಿಯ ಭಾವ ಕಡಿಮೆ.

೨. ಪುರುಷ ಪ್ರಯತ್ನ ಮತ್ತು ಶರಣಾಗತಿ ಸುಮಾರು ಸಮಾನ ಭಾವ.

೩. ಪುರುಷ ಪ್ರಯತ್ನ ಕಡಿಮೆ, ಶರಣಾಗತಿಯ ಭಾವ ಹೆಚ್ಚು.

೪. ಕೇವಲ ಶರಣಾಗತಿ.

ಪ್ರತಿಯೊಬ್ಬ ಜೀವಿಯು ತಾನು ಸುಖ-ಶಾಂತಿಯಿಂದ ಇರಲು ಪ್ರಯತ್ನಪಡುತ್ತಾನೆ. ಜೊತೆಜೊತೆಗೆ ಸೋಮಾರಿತನವೂ ಮನೆ ಮಾಡಿರುತ್ತದೆ. ಅನೇಕ ರೀತಿಯ ದ್ವಂದ್ವ ಸ್ವಭಾವಗಳು ನಮ್ಮಲ್ಲಿ ಕಾಣಬಹುದು.

ಇದಕ್ಕೆ ಕಾರಣ ನಮ್ಮ ಸ್ವಭಾವ. ಸಾಂಖ್ಯ ಮತ್ತು ಅದ್ವೈತ ವೇದಾಂತದ ಪ್ರಕಾರ ನಾವು ತ್ರಿಗುಣಗಳಿಂದ ಕೂಡಿದ್ದೇವೆ. ಸತ್ತ್ವ, ರಜಸ್ಸು ಹಾಗೂ ತಮಸ್ಸು. ಸೋಮಾರಿತನ, ಆಲಸ್ಯ ಮನೆಕೆಲಸಗಳನ್ನು ಮುಂದೂಡುತ್ತಿರುವುದು, ಬೇಜವಾಬ್ದಾರಿ, ಕೊಳಕು, ಮುಂತಾದ ಗುಣಗಳು ತಮೋಗುಣವನ್ನು ಸೂಚಿಸುತ್ತದೆ. ಚಟುವಟಿಕೆಯಿಂದ ಕೂಡಿರುವುದು, ಗುರಿ ಸಾಧನೆಯ ಪ್ರಯತ್ನ, ಕಾರ್ಯತತ್ಪರತೆ, ಮಹತ್ವಾಕಾಂಕ್ಷೆ, ಮುಂತಾದ ಗುಣಗಳು ರಜೋಗುಣವನ್ನು ಸೂಚಿಸುತ್ತದೆ. ಸರಳ ಜೀವನ, ಜ್ಞಾನ ಪಿಪಾಸೆ, ತಪೋನಿರತ ಜೀವನ, ಭಕ್ತಿ, ಅಧ್ಯಾತ್ಮದಲ್ಲಿ ಆಸಕ್ತಿ, ಸಹನೆ, ಸಮಾಧಾನ, ಮುಂತಾದ ಗುಣಗಳು ಸತ್ತ್ವಗುಣವನ್ನು ಸೂಚಿಸುತ್ತವೆ.

ನಮ್ಮಲ್ಲಿ ತಮೋಗುಣವು ಪ್ರಧಾನವಾಗಿದ್ದರೆ, ಸೋಮಾರಿತನದಿಂದ, ಎಲ್ಲವೂ ಭಗವಂತನ ಇಚ್ಛೆ ಎಂದು ಹೇಳುತ್ತಾ ಅದರ ಅಡಿಯಲ್ಲಿ ಆಶ್ರಯ ಪಡೆಯುತ್ತೇವೆ. ಆದ್ದರಿಂದ ಅಂತಹ ಸಮಯದಲ್ಲಿ ಪುರುಷ ಪ್ರಯತ್ನವು ಅತ್ಯಾವಶ್ಯಕ. ಕಾರ್ಯಶೀಲತೆ, ಕಾರ್ಯತತ್ಪರತೆಗಳಿಂದ, ಪುರುಷ ಪ್ರಯತ್ನದಿಂದ ವ್ಯಕ್ತಿಯು ಮುಂದೆ ಬರಬಹುದು. ಅದೇ ಸಮಯದಲ್ಲಿ ಭಗವಂತನಲ್ಲಿ ಪ್ರಾರ್ಥನೆ, ನಂಬಿಕೆ-ವಿಶ್ವಾಸಗಳು ನೆರವಾಗುತ್ತವೆ.

ತಮೋಪ್ರಧಾನ ಗುಣದಿಂದ ರಜೋಪ್ರಧಾನ ವ್ಯಕ್ತಿತ್ವವನ್ನು ನಾವು ಪಡೆದಾಗ, ನಮ್ಮಲ್ಲಿ ಚಂಚಲತೆ ಬಹುತೇಕವಾಗಿರುತ್ತದೆ. ಯುವಕರು ಹೇಳುವಂತೆ, ಎಲ್ಲವೂ ನನ್ನ ಪ್ರಯತ್ನದ ಮೇಲೆ ಅವಲಂಬಿಸಿದೆ; ಪುರುಷಪ್ರಯತ್ನವೇ ಶ್ರೇಷ್ಠ ಎಂಬೆಲ್ಲಾ ಆಲೋಚನೆಗಳು, ಸಿದ್ಧಾಂತಗಳು ನಮ್ಮ ಮನಸ್ಸಿನಲ್ಲಿ ಮೂಡುತ್ತವೆ. ಅನೇಕ ಆಸೆಗಳು, ಮಹತ್ವಾಕಾಂಕ್ಷೆಗಳು ನಮ್ಮನ್ನು ಶ್ರಮ ವಹಿಸುವಂತೆ ಮಾಡುತ್ತದೆ. ಅನೇಕ ರೀತಿಯ ಸುಖ-ದುಃಖ, ಲಾಭ-ನಷ್ಟ, ಅನುಕೂಲ-ಪ್ರತಿಕೂಲ ಸನ್ನಿವೇಶಗಳನ್ನು, ಅನುಭವಗಳನ್ನು ಹೊಂದಿದಾಗ, ಕ್ರಮೇಣ ಮನಸ್ಸು ಸುಸ್ತಾಗಿ ಹೊರಬರಲು ಇಚ್ಛಿಸುತ್ತದೆ. ಆಗ ಭಗವಂತನ ಕೃಪೆ, ಶರಣಾಗತಿಯ ಮಹತ್ವ ಸ್ವಲ್ಪ ಮಟ್ಟಿಗೆ ನಮಗೆ ತಿಳಿಯುತ್ತದೆ. ಶ್ರೀರಾಮಕೃಷ್ಣರು ಹೇಳುವಂತೆ ನಮ್ಮ ಅಹಂಕಾರ, ಇನ್ನೂ ಪರಿಪಕ್ವವಾಗಿರುವುದಿಲ್ಲ.

ಕರ್ಮಯೋಗ, ಉಪಾಸನೆ, ಸತ್ಸಂಗ, ಸದ್ಗ್ರಂಥಗಳ ಅಧ್ಯಯನ ಮುಂತಾದ ಆಧ್ಯಾತ್ಮಿಕ ಸಾಧನೆಗಳಿಂದ ಮನಸ್ಸು ನಿರ್ಮಲವಾಗಿ, ನಮ್ಮಲ್ಲಿ ಸತ್ತ್ವ ಪ್ರಧಾನ ವ್ಯಕ್ತಿತ್ವ ಮೂಡುತ್ತದೆ. ಆಗ ಸ್ವಾಭಾವಿಕವಾಗಿ ನಾವು ಪುರುಷಪ್ರಯತ್ನ ಮತ್ತು ಶರಣಾಗತಿಯ ಸ್ಥಾನಗಳನ್ನು, ಪಾತ್ರವನ್ನು ಅರಿಯುತ್ತೇವೆ. ಇವೆರಡು ಪಕ್ಷಿಯ ಎರಡು ರೆಕ್ಕೆಗಳು ಇರುವಂತೆ ಎಂದು ಸ್ವೀಕರಿಸಿ, ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡುತ್ತೇವೆ.

ಮೊದಲು ನಾವು ನಮ್ಮ ಸೋಮಾರಿತನದಿಂದ ಕ್ರಿಯಾಶೀಲರಾಗುವ ಮೂಲಕ ಹೊರಬರಬೇಕು. ಕರ್ಮಯೋಗದ ಮೂಲಕ ರಜಸ್ಸನ್ನು ಕ್ರಮೇಣ ಕಡಿಮೆಮಾಡಿಕೊಂಡು, ಸತ್ತ್ವವು ಪ್ರಧಾನವಾದಾಗ ಮಾತ್ರ ಶರಣಾಗತಿ ಬಹುಮಟ್ಟಿಗೆ ಸಾಧ್ಯ.

**ಉದ್ಧರೇದಾತ್ಮನಾಽಽತ್ಮಾನಂ ನಾತ್ಮಾನಮವಸದಯೇತ್ ।**
**ಆತ್ಮೈವ ಹ್ಯಾತ್ಮನೋ ಬಂಧುಃ ಆತ್ಮೈವ ರಿಪುರಾತ್ಮನಃ ॥**

*(ಗೀತಾ ೬.೫)*

'ಮನಸ್ಸಿನ ನೆರವಿನಿಂದ ಹಾಳಾಗದೆ, ತನ್ನ ಮನಸ್ಸಿನ ಸಹಾಯದಿಂದಲೇ ಉದ್ಧರಿಸಿಕೊಳ್ಳಬೇಕು. ಮಾನವನಿಗೆ ಮನಸ್ಸೇ ಬಂಧುವೂ ಶತ್ರುವೂ ಆಗಿದೆ.'

ಶ್ರೀರಾಮಾನುಜರು ''ತನ್ನಿಂದ ತಾನು ಉದ್ಧರಿಸಿಕೊಳ್ಳಬೇಕು ಎಂದರೆ, ವಿವೇಕದ ಸಹಾಯದಿಂದ, ಇಂದ್ರಿಯಗಳ, ಆಸೆಗಳ ದಾಸನಾಗಿರುವ ಮನಸ್ಸನ್ನು ನಾವು ಮೇಲೆತ್ತಬೇಕು'' ಎಂದು ಅರ್ಥೈಸುತ್ತಾರೆ.

ಭಗವಾನ್ ಶ್ರೀರಾಮಕೃಷ್ಣರು ''ನಾವು ಪುನಃ ಪುನಃ ಪಾಪಿಗಳು ಎಂದು ಆಲೋಚಿಸುತ್ತಿದ್ದರೆ, ಪಾಪಿಗಳೇ ಆಗುತ್ತೇವೆ'' ಎನ್ನುತ್ತಾರೆ. ಆದ್ದರಿಂದ ಸಚ್ಚಿಂತನೆ, ಸತ್ಕರ್ಮ, ಸತ್ಸಂಗಗಳ ಮೂಲಕ ಸ್ವಪ್ರಯತ್ನದಿಂದ ನಾವು ಸರಿಯಾದ ದಾರಿಯಲ್ಲಿ ನಡೆಯಬೇಕು. ಇಲ್ಲಿ ಪುರುಷಪ್ರಯತ್ನ ಹಾಗೂ ಸ್ವೇಚ್ಛೆ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ.

ನಮ್ಮಲ್ಲಿ ಅಗಾಧವಾದ ಶಕ್ತಿಯಿದೆ. ಅನೇಕ ಕಾರ್ಯಗಳನ್ನು ಎಸಗುವ ಸಾಮರ್ಥ್ಯವೂ ಇವೆ. ಅದನ್ನು ಸಂಪೂರ್ಣವಾಗಿ ಉಪಯೋಗಿಸುವ ಮುಂಚೆ, ಶರಣಾಗತಿ ಕೇವಲ ಬಾಯಿ ಮಾತು ಅಷ್ಟೇ. ಎಲ್ಲವೂ ಸರಿಯಾಗಿ ನಡೆಯುತ್ತಿದ್ದಾಗ, ಲಾಭದಾಯಕವಾಗಿರುವಾಗ, ಅದು ನಮ್ಮಿಂದ ಎಂದು ಬೀಗುತ್ತೇವೆ. ಕಾರ್ಯಗಳು ಸಾಧ್ಯವಾಗದೆ ಹೋದಾಗ ಅದು ಭಗವಂತನ ಇಚ್ಛೆ, ವಿಧಿಯ ಆಟ ಎಂದು ವಾದಿಸುತ್ತೇವೆ.

ಭಗವಾನ್ ಶ್ರೀರಾಮಕೃಷ್ಣರು ಹೇಳುವಂತೆ, ಪಕ್ಷಿಯೊಂದು ಜಹಜಿನ ಮೇಲೆ ವಿಶ್ರಾಂತಿ ಪಡೆಯುತ್ತಿತ್ತು. ನಿದ್ರೆಗೆ ಜಾರಿತು. ಸ್ವಲ್ಪ ಸಮಯದಲ್ಲೇ ಆ ಜಹಜು ಬಂದರಿನಿಂದ ತನ್ನ ಪಯಣವನ್ನು ಬೆಳಸಿತು. ಪಕ್ಷಿಗೆ ಎಚ್ಚರವಾದಾಗ, ಜಹಜು ಹಲವಾರು



ಕಿ.ಮೀ. ದಡದಿಂದ ಮುಂದೆ ಕ್ರಮಿಸಿತ್ತು. ಇದನ್ನು ಅರಿಯದ ಪಕ್ಷಿ ಪೂರ್ವದಿಕ್ಕಿನಲ್ಲಿ ದಡ ಸೇರಲೆಂದು ಹಾರಿಹೋಯಿತು. ಬಹಳ ಕಾಲ ಹಾರಿದರೂ, ದಡ ಕಾಣದ ಪಕ್ಷಿ ವಾಪಸ್ಸಾಗಿ ಜಹಜಿನ ಮೇಲೆ ಕುಳಿತು ವಿಶ್ರಾಂತಿ ಪಡೆಯಿತು. ಪುನಃ ಪಶ್ಚಿಮ ದಿಕ್ಕಿನಲ್ಲಿ ಹಾರಿತು. ದಡ ಕಾಣದೆ ಹಿಂತಿರುಗಬೇಕಾಯಿತು. ಹೀಗೆ ಉತ್ತರ, ದಕ್ಷಿಣ ದಿಕ್ಕಿನಲ್ಲೂ ಪ್ರಯತ್ನಿಸಿ ದಡವನ್ನು ಕಾಣದೆ, ಸೋತು ಜಹಜಿನ ಮೇಲೆ ಬಂದು ಕುಳಿತುಕೊಂಡಿತು. ಪಕ್ಷಿಯು ತನಗೆ ಸಾಧ್ಯವಾಗದಿದ್ದಾಗ ಜಹಜು ಎಲ್ಲಿ ಹೋಗುತ್ತದೆಯೋ ಅಲ್ಲಿಗೆ ಹೋಗೋಣ ಎಂದು ಕುಳಿತುಕೊಂಡಿತು.

ಹೀಗೆ ಮಾನವನು ತನ್ನ ಪ್ರಯತ್ನದ ಎಲ್ಲೆಯನ್ನು ಮೀರಿ, ಅಥವಾ ಅದರ ಅಂತಿಮ ಗುರಿಯನ್ನು ಮುಟ್ಟಿ, ಸಾಧ್ಯವಾಗ ದಿದ್ದಾಗ ನಿಜವಾದ ಶರಣಾಗತಿಗೆ ಬರುತ್ತಾನೆ. ಸೋಮಾರಿತನ ದಿಂದ ಶರಣಾಗತಿ ಬರಲು ಸಾಧ್ಯವಿಲ್ಲ. ಮಾನವನು ತನ್ನ ಪ್ರಯತ್ನವನ್ನು ಸಂಪೂರ್ಣವಾಗಿ, ಬಹುತೇಕವಾಗಿ ಮಾಡಿ, ಅದರ ಇತಿಮಿತಿಯುನ್ನು ತಿಳಿದಾಗ, ಅವನಲ್ಲಿ ವಿವೇಕ ಜಾಗೃತಿ ಉಂಟಾಗುತ್ತದೆ. ಆಗ ಭಗವಂತನಲ್ಲಿ ತಾನು ಶರಣಾಗುತ್ತಾನೆ. ಅವನ ಅಹಂ ಪಕ್ವವಾಗಿರುತ್ತದೆ. ಅನೇಕ ಭ್ರಾಂತಿಗಳು, ಕಲ್ಪನೆ ಗಳು ಮಾಯವಾಗಿರುತ್ತದೆ. ಆಗ ಅಂತಹ ಮಾನಸಿಕ ಸ್ಥಿತಿಯನ್ನು ಹೊಂದಿರುವ ಸಾಧಕನಿಗೆ, ತನ್ನ ಪ್ರಯತ್ನ ಅತ್ಯಲ್ಪ, ಭಗವಂತನ ಕೃಪೆ ಬಹುತೇಕ ಎಂದು ಖಚಿತವಾಗಿ, ಶರಣಾಗುತ್ತಾನೆ.

ಹೀಗೆ ಮುಂದುವರಿದಂತೆ, ಶ್ರೀರಾಮಕೃಷ್ಣರು ಹೇಳುವಂತೆ, 'ನಾನಲ್ಲ, ನೀನು' ಎಂಬ ನಿಲುವಿಗೆ ಬರುತ್ತಾನೆ.

### ಶರಣಾಗತಿ

ಭಗವಂತನಲ್ಲಿ ಶರಣಾದರೆ, ಎಲ್ಲವೂ ಸುಲಭವಾಗುತ್ತದೆ. ಎಲ್ಲವೂ ಭಗವಂತನ ಇಚ್ಛೆ ಎಂಬ ಮಾತುಗಳನ್ನು ನಾವು ಹೇಳು ತ್ತಿರುತ್ತೇವೆ. ಆದರೆ ಅದು ಹಲವರ ವಿಷಯದಲ್ಲಿ ಸಂಪೂರ್ಣ ವಾಗಿ ಸತ್ಯವಾಗಿರುವುದಿಲ್ಲ. ಅದು ಸಾಂಧರ್ಭಿಕವಾಗಿಯೂ, ಭಾಗಶಃ ಸತ್ಯವಾಗಿರುತ್ತದೆ. ಶರಣಾಗುವುದು ಅಷ್ಟು ಸುಲಭ ವಲ್ಲ.

ಭಗವಾನ್ ಶ್ರೀರಾಮಕೃಷ್ಣರು ಇದಕ್ಕೆ ಸಂಬಂಧವಾಗಿ ಕಥೆಯೊಂದನ್ನು ಹೇಳುತ್ತಾರೆ.

ರೈತನೊಬ್ಬ ತನ್ನ ತೋಟವನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಫಲವತ್ತಾದ ಅನೇಕ ಹಣ್ಣಿನ ಗಿಡಗಳು, ತರಕಾರಿ, ಮುಂತಾದವು ಚೆನ್ನಾಗಿ ಬೆಳದಿದ್ದವು. ಇಡೀ ದಿವಸ ಕೆಲಸಗಾರರ ಜೊತೆಯಿದ್ದು ಸರಿಯಾಗಿ ಕೆಲಸ ಮಾಡಿಸುತ್ತಿದ್ದ, ಕೆಲವೊಮ್ಮೆ ತಾನೂ ಮಾಡು ತ್ತಿದ್ದ.

ಹೀಗಿರಲು ಕರುವೊಂದು ರೈತನ ತೋಟಕ್ಕೆ ಒಂದು ಹಣ್ಣು-ತರಕಾರಿಗಳನ್ನು ತಿನ್ನುತ್ತಿತ್ತು. ಇದನ್ನು ಕಂಡ ರೈತನಿಗೆ ಪಿತ್ತ ನೆತ್ತಿಗೇರಿತ್ತು. ಕೋಪದಿಂದ ವಿವೇಕಶೂನ್ಯನಾದನು. ಕೈಗೆ ಸಿಕ್ಕಿದ ಕೋಲನ್ನು ತೆಗೆದುಕೊಂಡು ಕರುವಿಗೆ ಜೋರಾಗಿ ಹೊಡೆಯಲು ಆರಂಭಿಸಿದ. ಬಿಟ್ಟಿದ್ದರೆ ಕರು ಹೊರಟು ಹೋಗುತ್ತಿತ್ತು. ಆದರೆ ಅವನು ಅಟ್ಟಾಡಿಸಿಕೊಂಡು ಚೆನ್ನಾಗಿ ಹೊಡೆದ. ಅದು ಸತ್ತೇ ಹೋಯಿತು. ಗೋಹತ್ಯೆ ಮಹಾಪಾಪ. ರೈತನು ಗೋಹತ್ಯೆ ಯನ್ನು ಮಾಡಿದ್ದರಿಂದ, ಪಾಪಪುರುಷನು ರೈತನನ್ನು ಸೇರಲು ಬಂದನು. ರೈತನು ಕಾರಣ ಕೇಳಲು ಪಾಪಪುರುಷನು, ''ನೀನು ಗೋಹತ್ಯೆ ಮಾಡಿರುವೆ. ಆದ್ದರಿಂದ ನಿನ್ನನ್ನು ಸೇರುತ್ತೇನೆ'' ಎಂದನು. ರೈತನು ''ನನ್ನ ಕೈಯ ಅಧಿಪತಿ ಇಂದ್ರ. ಆದ್ದರಿಂದ ಈ ಪಾಪದ ಹೊಣೆ ಇಂದ್ರನದ್ದು. ಅವನನ್ನು ಸೇರು'' ಎಂದನು.

ಪಾಪಪುರುಷ ಇಂದ್ರಲೋಕವನ್ನು ಸೇರಿದನು. ದೇವತೆಗಳು ಪಾಪಪುರುಷನನ್ನು ಕಂಡು ಆಶ್ಚರ್ಯಗೊಂಡರು. ''ನಿನಗೆ ಇಲ್ಲೇನು ಕೆಲಸ?'' ಎಂದು ಪ್ರಶ್ನಿಸಿದರು. ಪಾಪಪುರುಷನು ಘಟನೆಯನ್ನು ವಿವರಿಸಿದನು. ಇಂದ್ರನು ಸ್ವಲ್ಪ ಕಾಲಾವಕಾಶ ನೀಡಬೇಕೆಂದು ಪಾಪಪುರುಷನಲ್ಲಿ ವಿನಂತಿಸಿಕೊಂಡನು. ಮಾರು ವೇಷದಲ್ಲಿ ಭೂಲೋಕಕ್ಕೆ ಬಂದನು. ಆ ರೈತನ ತೋಟವನ್ನು ಪ್ರವೇಶಿಸಿದ. ರೈತನು ಇಂದ್ರನನ್ನು ''ನೀನು ಯಾರು? ಇಲ್ಲಿಗೆ ಏಕೆ ಬಂದಿರುವೆ'' ಎಂದು ಪ್ರಶ್ನಿಸಿದ. ಇಂದ್ರನು ''ಸ್ವಾಮಿ, ನಾನು ಪಕ್ಕದ ಊರಿಗೆ ಹೋಗುತ್ತಿದ್ದೆ. ದಾರಿಯಲ್ಲಿ ಈ ಸುಂದರ ತೋಟವನ್ನು ಕಂಡೆ. ಆದ್ದರಿಂದ ಇದನ್ನು ಹಾಗೂ ಇದರ ಯಜ ಮಾನನನ್ನು ಕಾಣಬೇಕೆಂದು ಬಂದಿರುವೆ'' ಎಂದನು. ರೈತನು ಈ ಮಾತುಗಳನ್ನು ಕೇಳಿ ಉಬ್ಬಿಹೋದನು. ಸಂತೋಷಗೊಂಡ ಇಂದ್ರನನ್ನು ತೋಟದೊಳಗೆ ಕರೆದುಕೊಂಡು ಹೋದನು. ಗಿಡ, ಮರಗಳನ್ನು ಯಾರು ಹೇಗೆ ಬೆಳೆಸಿದ್ದು ಎಂದು ಇಂದ್ರ ಪ್ರಶ್ನಿ ಸಲು, ''ತಾನು'' ಎಂದು ಆತ ವಿವಿಧ ರೀತಿಯಲ್ಲಿ ವರ್ಣಿಸಿದ.

ಕರು ಸತ್ತ ಜಾಗಕ್ಕೆ ಬಂದಾಗ, ಇಂದ್ರ, ''ಅಯ್ಯೋ? ಕರು ಸತ್ತು ಹೋಗಿದೆ. ಯಾರು ಇದನ್ನು ಸಾಯಿಸಿದ್ದು?'' ಎಂದು ಪ್ರಶ್ನಿಸಿದನು. ಈಗ ರೈತನಿಗೆ ಧರ್ಮಸಂಕಟ. ತಾನು ಎಂದು ಹೇಳಲು ಧೈರ್ಯವಿಲ್ಲ. ಇಂದ್ರನೆಂದು ಹೇಳಲು ಸಾಧ್ಯವಾಗು ತ್ತಿಲ್ಲ. ಕುಪಿತಗೊಂಡ ಇಂದ್ರನು, ''ಏನು! ಈ ಗಿಡಮರಗಳನ್ನು ನೀನು ಬೆಳಸಿದ್ದು. ತೋಟವನ್ನು ನೀನು ಮಾಡಿದೆ ಎಂದು ಈಗಷ್ಟೇ ಹೇಳಿದೆ. ಆದರೆ ಗೋಹತ್ಯೆಯನ್ನು ಮಾತ್ರ ಇಂದ್ರ ಮಾಡಿದನೆ?'' ಎಂದಾಗ ರೈತನ ಬಳಿ ಉತ್ತರವಿರಲಿಲ್ಲ. ಇಂದ್ರನು ಪಾಪಪುರುಷನಿಗೆ ರೈತನನ್ನು ಸೇರಲು ಹೇಳಿ ಅದೃಶ್ಯ ನಾದನು. ಹೀಗೆ ಕಾರ್ಯಗಳು ಯಶಸ್ವಿಯಾದಾಗ, ಅದರ ಹೊಣೆಯನ್ನು ನಾವು ಹೊರುತ್ತೇವೆ. ನಮ್ಮಿಂದ ಆಗಿರುವುದು ಎಂದು ಬೀಗುತ್ತೇವೆ.

ಆದರೆ ಕಾರ್ಯದಲ್ಲಿ ನಷ್ಟವುಂಟಾದಾಗ, ಸೋಲುಂಟಾ ದಾಗ, ಅದಕ್ಕೆ ಕಾರಣ ಭಗವಂತ ಎಂದು ಜಾರಿಕೊಳ್ಳುತ್ತೇವೆ. ಇದು ಶರಣಾಗತಿಯಲ್ಲ. ಎಲ್ಲ ಸಮಯದಲ್ಲೂ ಭಗವಂತನೇ ನಿಜವಾದ ಕರ್ತೃ, ನಾನು ಅವನ ಉಪಕರಣ ಎಂಬ ಬುದ್ಧಿ

ಯನ್ನು ಹೊಂದಿದಾಗ ಮಾತ್ರ ನಿಜವಾಗಿ, ಸಂಪೂರ್ಣವಾಗಿ, ಶರಣಾಗತರಾಗಿದ್ದೇವೆ ಎಂದು ತಿಳಿಯಬೇಕು.

ಭಗವಾನ್ ಶ್ರೀರಾಮಕೃಷ್ಣರು ಹೇಳುವಂತೆ, ಅದು ಪಕ್ವ ಅಹಂ. ವೈಯಕ್ತಿಕ ಅಹಂಕಾರ ವಿಶ್ವಾತ್ಮನಲ್ಲಿ ಲಯಹೊಂದಿ, 'ನಾನಲ್ಲ, ನೀನು' ಎಂಬ ಭಾವವನ್ನು ಹೊಂದುತ್ತೇವೆ.

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ।**
**ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥**

*(ಗೀತಾ ೧೮-೬೬)*

'ಎಲ್ಲಾ ಧರ್ಮಗಳನ್ನು ತ್ಯಜಿಸಿ ಕೇವಲ ನನಗೆ ಶರಣಾಗು. ನಾನು ನಿನ್ನನ್ನು ಎಲ್ಲಾ ಪಾಪಗಳಿಂದ ಮುಕ್ತಗೊಳಿಸುತ್ತೇನೆ, ಶೋಕಿಸಬೇಡ.'

ಶ್ರೀರಾಮಾನುಜರು ಎಲ್ಲಾ ಧರ್ಮಗಳನ್ನು ತ್ಯಜಿಸುವುದು ಎಂದರೆ ಹೀಗೆ ವಿವರಿಸುತ್ತಾರೆ.

೧) ನಾನು ಕರ್ತಾ ಎಂಬ ಅಹಂಕಾರವನ್ನು ತ್ಯಜಿಸುವುದು
೨) ಕರ್ಮ ಮತ್ತು ಅದರ ಫಲಕ್ಕೆ ಅಂಟಿಕೊಳ್ಳದಿರುವುದು.
೩) ಭಗವಂತನೇ ಎಲ್ಲಾ ಕರ್ಮಗಳ ಕರ್ತಾ, ಪೂಜೆಗೆ ಅರ್ಹ, ಅವನೇ ಗುರಿ ಮತ್ತು ದಾರಿ ಎಂದು ತಿಳಿದು ನಡೆಯುವುದು.

ಇಲ್ಲಿ ಸಾಧಕನು ಪುರುಷ ಪ್ರಯತ್ನದ ಮಹತ್ವವನ್ನು ಅರಿತಿರುತ್ತಾನೆ. ಆದರೆ ಅದೇ ಸಮಯದಲ್ಲಿ ಅದರ ಇತಿಮಿತಿಯನ್ನು ಚೆನ್ನಾಗಿ ಪ್ರಯೋಜನ, ಪರಮ ಲಾಭವನ್ನು ಪಡೆಯಬಹುದು, ಎಂದು ಸ್ಪಷ್ಟವಾಗಿ ತಿಳಿದಿರುತ್ತಾನೆ.

ಭಗವಾನ್ ಶ್ರೀ ರಾಮಕೃಷ್ಣರು ಎರಡು ರೀತಿಯ ಶರಣಾಗತಿಯನ್ನು ತಿಳಿಸಿದ್ದಾರೆ.

೧) ಮರ್ಕಟ ಶರಣಾಗತಿ
೨) ಮಾರ್ಜಾಲ ಶರಣಾಗತಿ

**ಮರ್ಕಟ ಶರಣಾಗತಿ**

ಕೋತಿ ಮರಿಯು ತನ್ನ ತಾಯಿಯ ಹೊಟ್ಟೆಯನ್ನು ಬಲವಾಗಿ ಹಿಡಿದುಕೊಂಡಿರುತ್ತದೆ. ತಾಯಿ ಕೋತಿಯು ಮರದಿಂದ ಮರಕ್ಕೆ ಜಿಗಿಯುತ್ತಿದ್ದಾಗ, ಎಲ್ಲಿಯವರೆಗೆ ಕೋತಿ ಮರಿಯು ತನ್ನ ತಾಯಿಯನ್ನು ಬಲವಾಗಿ ಹಿಡಿದುಕೊಂಡಿರುತ್ತದೆಯೋ, ಅಲ್ಲಿಯವರೆಗೂ ಯಾವುದೇ ಭಯವಿಲ್ಲ. ಕೋತಿ ಮರಿಯು ಅಕಸ್ಮಾತ್ತಾಗಿ ಕೈ ಬಿಟ್ಟರೆ ಅಪಾಯ ತಪ್ಪಿದ್ದಲ್ಲ.

ನಾವು ಭಗವಂತನನ್ನು ಹಿಡಿದುಕೊಂಡಾಗ, ಹೀಗೆ ಉಂಟಾಗುತ್ತದೆ.

**ಮಾರ್ಜಾಲ ಶರಣಾಗತಿ**

ತಾಯಿಬೆಕ್ಕು ತನ್ನ ಮರಿಗಳನ್ನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಬದಲಾಯಿಸುತ್ತಿರುತ್ತದೆ. ಕಾರಣ ಬೆಕ್ಕಿನ ಮರಿಗಳ ಸುರಕ್ಷೆಯ ದೃಷ್ಟಿಯಿಂದ. ಬೆಕ್ಕಿನ ಮರಿಗಳಿಗೆ ಅಪಾಯ ಬಂದಾಗ, ಅವು 'ಮೀಯಾವ್, ಮೀಯಾವ್' ಎಂದು ತಾಯಿಗೆ ಕೂಗುತ್ತವೆ. ಆಗ ತಾಯಿಬೆಕ್ಕು ಬಂದು ಮರಿಗಳನ್ನು ರಕ್ಷಿಸುತ್ತದೆ. ಇದು ಭಗವಂತ ನಮ್ಮನ್ನು ಹಿಡಿಯುವುದು.



ಭಗವಂತನಲ್ಲಿ ಸಂಪೂರ್ಣವಾಗಿ ನಿರ್ಭರಗೊಳ್ಳುವುದು ಎಂದು. ಹೀಗೆ ನಾವು ಸಂಪೂರ್ಣವಾಗಿ ಭಗವಂತನಲ್ಲಿ ಶರಣಾದಾಗ ಅವನು ನಮ್ಮನ್ನು ಎಲ್ಲಾ ರೀತಿಯಿಂದಲೂ ನೋಡಿಕೊಳ್ಳುತ್ತಾನೆ, ರಕ್ಷಿಸುತ್ತಾನೆ.

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥**

*(ಗೀತೆ, ೯-೨೨)*

'ಬೇರೆ ಯಾವ ಗುರಿಯಿಲ್ಲದೆ, ನನ್ನನ್ನು ಚಿಂತಿಸುತ್ತ ಯಾರು ಆರಾಧಿಸುತ್ತಾರೋ, ಸದಾ ಅವರ ಅಪೇಕ್ಷೆ ಮತ್ತು ರಕ್ಷಣೆಯನ್ನು ನಾನು ನೋಡಿಕೊಳ್ಳುತ್ತೇನೆ.'

ಭಗವಂತನೇ ನಮಗೆ ಅಭಯ ಹಾಗೂ ವರಗಳನ್ನು ನೀಡಿದ್ದಾನೆ. ನಾವು ನಮ್ಮ ಅಹಂಭಾವವನ್ನು ತ್ಯಜಿಸಿ, ಅವನಲ್ಲಿ ಶರಣಾಗಬೇಕು ಅಷ್ಟೇ.

ಸ್ವಪ್ರಯತ್ನ ಕಷ್ಟ. ಆದರೆ ಶರಣಾಗತಿ ಇನ್ನೂ ಕಷ್ಟ. ಆದರೆ ಸಾಧ್ಯ. ಒಮ್ಮೆ ಸಾಧ್ಯವಾದರೆ ನೀವು ಆನಂದದಿಂದ, ಶಾಂತಿಯಿಂದ, ನಿಶ್ಚಿಂತರಾಗಿ ಇರಬಹುದು. ✱

ಪ್ರತಿಯೊಬ್ಬ ಸ್ತ್ರೀಪುರುಷರನ್ನು ದೇವರಂತೆ ನೋಡಿ. ನೀವು ಯಾರಿಗೂ ಸಹಾಯ ಮಾಡಲಾರಿರಿ. ಬೇಕಾದರೆ ನೀವು ಸೇವೆ ಮಾಡಬಹುದು. ನಿಮಗೆ ಆ ಭಾಗ್ಯ ಬಂದರೆ ನೀವು ಭಗವಂತನ ಮಕ್ಕಳನ್ನು ಪೂಜಿಸಬಹುದು; ಆತನನ್ನು ಪೂಜಿಸಬಹುದು. ಭಗವಂತನು ತನ್ನ ಮಕ್ಕಳ ಸೇವೆಗೆ ನಿಮಗೆ ಅವಕಾಶ ಒದಗಿಸಿಕೊಟ್ಟರೆ ನೀವೇ ಧನ್ಯರು ಎಂದು ಭಾವಿಸಿ.

— ಸ್ವಾಮಿ ವಿವೇಕಾನಂದ